ಶ್ರೀ ಕೆ. ಎಚ್. ರಂಗನಾಥ್ (ಸಹಕಾರ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಇಲ್ಲ.

(ಈ) ಇಲ್ಲ.

(ಉ) ಉದ್ಭವಿಸುವುದಿಲ್ಲ.

ಶ್ರೀ ಅನಿವಾಳದ ನಂಜಪ್ಪ.—ನನ್ನ ಪ್ರಶ್ನೆಗಳಿಗೆ ಎಲ್ಲದ್ದಕ್ಕೂ ಇಲ್ಲ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಆರಸೀಕೆರೆ ತಾಲ್ಲೂಕಿನಲ್ಲಿ ಅನೇಕ ಸಾರ್ವಜನಿಕ ಸಭೆಗಳಲ್ಲಿ, ಸೇವಾ ಸಹಕಾರ ಸಂಸ್ಥೆಗಳವರು, ಅಭಿವೃದ್ಧಿ ಮಂಡಲಿಗಳವರು ಸಮ್ಮೇಳನಗಳನ್ನು ಮಾಡಿ ತೀರ್ಮಾನಗಳನ್ನು ಮಾಡಿ, ನೂಲಿನ / ರಣಿಗಳನ್ನು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿದ್ದಾರೆ ನನ್ನ ಹತ್ತಿರವೂ ಕೂಡ ಅದರ ಒಂದು ಪ್ರತಿ ಇದೆ. ತಮಗೆ ಅದನ್ನು ಕಳುಹಿಸಿಕೊಡುತ್ತೇನೆ. ಆರಸೀಕೆರೆ ತಾಲ್ಲೂಕಿನಲ್ಲಿ ಎರಡು ಲಕ್ಷ ಜನ ಇದ್ದು ಅಲ್ಲಿ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿ ಕೈಗಾರಿಕಾ ವಿಕೇಂದ್ರೀಕರಣದ ತಪ್ಪು ಆಧಾರದ ಮೇಲೆ ತೊಂದರೆಯಾಗಿದೆ. ತಾಲ್ಲೂಕಿನಲ್ಲಿ ಹತ್ತಿಯ ಬೆಳೆ ಜಾಸ್ತಿಯಾಗುತ್ತಿರುವುದಿಂದಲೂ ತಾವು ನೂಲಿನ ಗಿರಣಿಗಳನ್ನು ಸ್ಥಾಪನೆ ಮಾಡುವುದು ಸೂಕ್ತವಲ್ಲವೇ ?

† ಶ್ರೀ ಕೆ. ಎಚ್. ರಂಗನಾಥ್.—೧೯೭೨ರಲ್ಲಿ ಸಹಕಾರ ಸಂಘಗಳವರು ಠರಾವು ಮಾಡಿದ್ದಾರೆ. ೧೯೭೪ರ ನಂತರ ಅದನ್ನು ಇಂಡಸ್ಟ್ರೀಸ್ ಡಿಪಾರ್ಟಮೆಂಟಿಗೆ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಅನಿವಾಳದ ನಂಜಪ್ಪ.— ಇಂಡಸ್ಟ್ರೀಸ್ ಡಿಪಾರ್ಟಮೆಂಟಿಗೋ ಅಥವಾ ಸರ್ಕಾರಕ್ಕೋ ಕೊಟ್ಟಿದ್ದಾರೆ. ಆದಷ್ಟು ಜಾಗ್ರತೆಯಾಗಿ ನೂಲಿನ ಗಿರಣಿಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ. ಎಚ್. ರಂಗನಾಥ್.—೨ ಸಹಕಾರ ಸಂಘಗಳವರು ಒಂದು ಠರಾವು ಮಾಡಿ ೩ಳ ಲಕ್ಷ ರೂಪಾಯಿಗಳ ಸೇರಿ ಬಂಡವಾಳವನ್ನು ಶೇಖರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇವೊತ್ತಿನದಿವಸ ಆರಸೀಕೆರೆಯ ಸಹಕಾರ ಸಂಘದ ಬ್ಯಾಲೆನ್ಸ್‌ಷೀಟ್ ನೋಡಿದರೆ ಅವರ ಹಣಕಾಸಿನ ಪರಿಸ್ಥಿತಿ ಅಲ್ಲಿ ನೂಲಿನ ಗಿರಣಿಯನ್ನು ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಮಾನ್ಯ ಸದಸ್ಯರ ಅಭಿಪ್ರಾಯವೇನೋ ಸೂಕ್ತವಾದದ್ದು. ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಮತ್ತು ಉದ್ಯೋಗವನ್ನು ಒದಗಿಸಬೇಕು. ಆದರೆ ಆ ಗಿರಣಿಗೆ ಸುಮಾರು ೨ ಕೋಟಿ ೮೬ ಲಕ್ಷ ರೂಪಾಯಿಗಳು ಬೇಕಾಗಿರುವುದರಿಂದ ಸದ್ಯಕ್ಕೆ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

Water and Air Pollution

331 SMT. C. NAGAMMA KESHAVA MURTHY (Davangere).—Will the Minister for Health be pleased to state.—

(*a*) whether the Government have received any representation regarding Water and Air Pollutions in the State (District wise names of the Industries may be furnished)

(*b*) if so, the action taken ?

SRI SUBHASH ASTURE.—(Minister of State for major and medium Irrigations) On behalf of Sri H. Siddaveerappa (Minister for Health).

(*a*) Complaints have been received in respect of the following ndustries.—

Water Pollution

	District			*Name of Industries*
1.	North Kanara District Karwar		:	Caustic Soda Factory
2.	Chitradurga	...	:	Harihar Polyfibres
3.	Bangalore	...	:	Nandi Breweries & Distillaries
4.	South Kanara Mangalore	...	:	Mangalore Chemicals & Fertilisers Ltd.
5.	Bellary	...	:	Khandasari Sugar Mills Siruguppa
6.	Tumkur	...	:	Khandasari Sugar Factory Kenkere

Air Pollution

1.	Bijapur	...	:	Bagalkot Udyog Ltd, Bagalkot
2.	Tumkur	...	:	Mysore Cements, Ammasandra
3.	Chitradurga	...	:	Mandakki Factory at Narasarajapet Davangere.

(*b*) The Karnataka State Board for Prevention and Control of Water Pollution which has been constituted by Government under the Central Water (Prevention and control of Pollution) Act (Central Act 6 of 1974) is actively considering the steps to be taken to prevent water pollution.

As regards Air Pollution, there is no corresponding Act enabling the State Government to take legal steps to control Air Pollution, the matter will however, be examined further.

ಶ್ರೀಮತಿ ಪಿ. ನಾಗಮ್ಮ ಕೇಶವಮೂರ್ತಿ.— ಸ್ವಾಮಿ (b) ಪ್ರಶ್ನೆಗೆ ಉತ್ತರವಾಗಿ "There is no corresponding Act enabling the State Government to take legal steps" ಎಂದು ಹೇಳಿದ್ದೀರಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಮತ್ತು ಏನು ಕಾರ್ಯಗತ ಆಗಿದೆ ಎಂಬುದನ್ನು ತಿಳಿಸುತ್ತೀರಾ?

† SRI SUBHASH ASTHURE.— For the prevention of water pollution a Board is constituted and we have made certain rules in 1976 and certain factories were asked to take measures to prevent water pollution. Certain time is given to them to take steps and they are proceeding according to the schedule.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕಾರವಾರ ಕಾಸ್ಟಿಕ್ ಸೋಡಾ ಕಾರ್ಖಾನೆಯ ಕೆಟ್ಟ ನೀರು ನದಿಯನ್ನು ಸೇರುವುದರಿಂದ ಆ ನೀರು ಮಲಿನಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಳು ಸಾಯುತ್ತಾ ಇವೆ, ಮತ್ತು ಹರಿಹರದ ಪಾಲಿಫೈಬರ್ಸ್ ಕೈಗಾರಿಕೆಯ ಕೆಟ್ಟ ನೀರು ನದಿಯನ್ನು ಸೇರುವುದರಿಂದ ಆ ನೀರು ಮಲಿನಗೊಂಡು ಆ ಪ್ರದೇಶದ ಹಳ್ಳಿಗಳ ಜನಗಳಿಗೆ ಕುಡಿಯುವ ನೀರಿಗೆ ಮತ್ತು ದನಗಳು ಕುಡಿಯುವ ನೀರಿಗೆ ತೊಂದರೆಯಾಗಿರುವುದರಿಂದ ಆ ಜನಗಳಿಗೆ ಅನಾನುಕೂಲವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ದಾವಣಗೆರೆಯ ನರಸರಾಜಪೇಟೆಯಲ್ಲಿರುವ ಮಂಡಕ್ಕಿ ಕಾರ್ಖಾನೆಯಿಂದ ಗಾಳಿ ಮಲಿನಗೊಳ್ಳುವುದು ತಮ್ಮ ಗಮನಕ್ಕೆ ಬಂದಿದೆಯೇ? ಅದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ಬೇರೆ ಕಡೆಗೆ ಶಿಫ್ಟ್ ಮಾಡುವುದಕ್ಕೆ ಸರ್ಕಾರದವರು ಏನು ಕ್ರಮತೆಗೆದು ಕೊಂಡಿದ್ದಾರೆ ? ಮತ್ತು ಕೈಗಾರಿಕೆಯವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ?

SRI SUBHASH ASTHURE.— These factories are taking steps to see that water is not polluted. We are inspecting their work whether they are proceeding according to schedule. These things are long-range activities and they cannot be done overnight. Therefore, certain time is given to them. Still, they are Within time. If they fail to take steps accordingly, after the expiry of the time we will take action. Even in case of other factories, if anybody brings to the notice of the Government we will look into it and take action. In some cases, we have de-licensed their factories. We will take action if they don't observe rules and regulations.

ಶ್ರೀ ಆರ್.ಎಸ್. ಪಾಟೀಲ್.— ಈ ಪ್ರಶ್ನೆಯನ್ನು ಎರಡು ವರ್ಷಗಳ ಹಿಂದೆ ಕೇಳಿದಾಗ ಈಗ ಕೊಟ್ಟಂತಹ ಉತ್ತರವನ್ನೇ ಕೊಟ್ಟಿದ್ದಾರೆ. ಆಗ ವ್ಯವಸಾಯ ಮಂತ್ರಿಗಳಾಗಿದ್ದವರು ಮತ್ತು ಹೆಲ್ತ್ ಮಂತ್ರಿಗಳಾಗಿದ್ದವರು ಆ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ. ಮತ್ತು ಆ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು, ಅವರು ಆ ರೀತಿ ಯೋಗ್ಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಏನಾದರೂ ಟೈಮ್ ಲಿಮಿಟ್ ಹಾಕಿದ್ದರೇ ? ಆ ಫ್ಯಾಕ್ಟರಿಗಳಲ್ಲಿ ಹೊರಕ್ಕೆ ಬರುವ ಕೆಟ್ಟ ನೀರು ನದಿಯನ್ನು ಸೇರುವುದರಿಂದ ನದಿಯ ನೀರು ಮಲಿನಗೊಂಡು ದನಕರುಗಳು ಹಾಗೂ ಜನಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಆ ಬಗ್ಗೆ ಸರ್ಕಾರದವರು ಯೋಗ್ಯ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಆ ಪ್ರದೇಶದ ಜನಗಳು ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳಿದ್ದು ಹಿಂದೆ ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ಆ ಬಗ್ಗೆ ಎಷ್ಟು ದಿವಸಗಳಲ್ಲಿ ಕ್ರಮತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ?

ಶ್ರೀ ಸುಭಾಷ್ ಅಸ್ತೂರೆ.— ಈ ಪ್ರಶ್ನೆಗೆ ಹಿಂದೆ ಉತ್ತರ ಕೊಟ್ಟಮೇಲೆ ಆ ಬಗ್ಗೆ ಯಾವ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಯೋಚಿಸಿ ಆ ರೀತಿ ಕ್ರಮತೆಗೆದುಕೊಳ್ಳಲಾಗಿದೆ. ಮೊದಲು ಇದ್ದ ಪರಿಸ್ಥಿತಿಗೂ ಈಗ ಇರುವ ಪರಿಸ್ಥಿತಿಗೂ ಸಾಕಷ್ಟು ಇಂಪ್ರೂವ್‌ಮೆಂಟ್ ಆಗಿದೆ. ಅಲ್ಲಿ ಯಾವುದೇ ಇಂಪ್ರೂವ್‌ಮೆಂಟ್ ಆಗದಿದ್ದರೆ ಆ ಬಗ್ಗೆ ಖಂಡಿತವಾಗಿಯೂ ನಾವು ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಜಿ. ಬಾಳಿಕಾರ್.— ಆ ಬಗ್ಗೆ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆ ಎಂದು ಅದಕ್ಕೆ ಅವಧಿ ಕೊಟ್ಟಿದೆಯೇ? ಒಂದು ವೇಳೆ ಅದಕ್ಕೆ ಅವಧಿಯನ್ನು ಕೊಟ್ಟಿದ್ದರೆ ಯಾವ ಯಾವ ಫ್ಯಾಕ್ಟರಿಗೆ ಎಲ್ಲಿಯವರೆಗೆ ಅವಧಿಯನ್ನು ಕೊಟ್ಟಿದೆ? ಅಲ್ಲಿ ದನಕರಗಳಿಗೆ ಮತ್ತು ಜನಗಳಿಗೆ ಕುಡಿಯುವುದಕ್ಕೆ ನೀರಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಅಲ್ಲಿ ಮಲಿನಗೊಂಡ ನೀರನ್ನು ದನಕರುಗಳು ಕುಡಿದು ಸಾಯುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

SRI SUBHASH ASTHURE.— I want notice. They have to construct certain things; for instance, if they want to divert this water to a stream not used for drinking water, it will need some time. Therefore certain time is given. considering the magnitude of the work. They moment the time is over, if they fail to comply with the instructions given by the Government, action will be taken.

ಶ್ರೀ ಬಿ. ಬಸವಯ್ಯ.— ವಾಟರ್ ಮತ್ತು ಏರ್ ಪಲ್ಯೂಷನ್ ಬೋರ್ಡಿನಲ್ಲಿ ಇರತಕ್ಕವಷ್ಟು ಅದರಲ್ಲಿ ಯಾವುದಾದರೂ ಪರಿಣತೆಯನ್ನು ಹೊಂದಿದ್ದಾರೆಯೇ? ಅಥವಾ ಯೂರೋ ಪಿ.ಡಬ್ಲ್ಯೂ.ಡಿ ಅಧಿಕಾರಿಗಳನ್ನು ಅದರಲ್ಲಿ ನೇಮಿಸಿದ್ದೀರಾ? ನಾವು ಎಸ್ಟಿಮೇಟ್ ಕಮಿಟಿಯ ಸದಸ್ಯರಾಗಿ ಹರಿಹರ ಪಾಲಿ ಫೈಬರ್ಸ್ ಫ್ಯಾಕ್ಟರಿಗೆ ವಿಜಿಟ್ ಕೊಟ್ಟಾಗ ಆ ಫ್ಯಾಕ್ಟರಿಗೆ ಸರ್ಕಾರದ ಅಧಿಕಾರಿಗಳು ಸಪೋರ್ಟ್ ಮಾಡಿದ್ದಾರೆ ಮತ್ತು ಈ ವಿಷಯವನ್ನು ಮಾನ್ಯ ಮಂಖ್ಯ ಮಂತ್ರಿಗಳ ಗಮನಕ್ಕೆ ತಂದಾಗ ಆ ಫ್ಯಾಕ್ಟರಿಯವರು ಈ ಮಲಿನ ನೀರನ್ನು ಬೇರೆ ಕಡೆಗೆ ಡೈವರ್ಟ್ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಎರಡು ತಿಂಗಳಲ್ಲಿ ಮುಚ್ಚಬೇಕಾಗುತ್ತದೆ ಎಂದು ಎರಡು ತಿಂಗಳ ಟೈಮ್ ಕೊಟ್ಟಿದ್ದರು. ಆ ತರಹ ಕ್ರಮವನ್ನು ಏನಾದರೂ ಸರ್ಕಾರದವರು ತೆಗೆದುಕೊಂಡಿದ್ದಾರೆಯೇ? ಸರ್ಕಾರಿ ಅಧಿಕಾರಿಗಳು ಯಾವೊತ್ತೂ ಸಹ ಫ್ಯಾಕ್ಟರಿಯವರಿಗೆ ಸಪೋರ್ಟ್ ಮಾಡುವುದಿಲ್ಲ. ಆಗಬಾರದು ಈಗ ಅನ್ಯಸಂದ್ರದಲ್ಲಿರುವ ಸಿಮೆಂಟ್ ಫ್ಯಾಕ್ಟರಿಯಿಂದ ಹೊರಗಡೆಬರುವ ಧೂಳು ತೆಂಗಿನ ಮರದ ಡಿವಾಜಿಟ್ ಆಗಿ ಮರಗಳು ಬೆಳೆಯುವುದಿಲ್ಲ, ಫಲಕ್ಕೆ ತೊಂದರೆಯಾಗುತ್ತದೆ ಆದ್ದರಿಂದ ಇಂಥಾ ಅನ್ಯಾಯವನ್ನು ತಪ್ಪಿಸುವುದಕ್ಕೆ ಏರ್ ಮತ್ತು ವಾಟರ್ ಪಲ್ಯೂಷನ್ ಬೋರ್ಡಿನಲ್ಲಿ ಪರಿಣತರಾದವರನ್ನು ನೇಮಿಸುತ್ತೀರಾ ?

ಶ್ರೀ ಸುಭಾಷ್ ಅಸ್ತೂರೆ.— ಅಲ್ಲಿರತಕ್ಕ ಅಧಿಕಾರಿಗಳು ಪರಿಣತರಾಗಿದ್ದಾರೆ, ಇದರ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಸಲಹೆ ಕೊಟ್ಟರೆ ಆ ಬಗ್ಗೆ ಕ್ರಮತೆಗೆದುಕೊಳ್ಳತ್ತೇವೆ

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಏರ್ ಮತ್ತು ವಾಟರ್ ಪಲ್ಯೂಷನ್ ಬಗ್ಗೆ ಯಾವುದಾದರೂ ಒಂದು ಆಕ್ಟ್ ಜಾರಿಗೆ ತರುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ?

SRI SUBHASH ASTHURE,— As regards air pollution, under article 252 we are expecting the Government of India to have a comprehensive Act for this purpose. So far, there is no legislation done by our State. We are expecting the Centre to do something in this regard. The moment they take action, we well follow them Till then, we are expecting only the Act of the Cental Government.

SMT. VIJAYA DESAI.— May I know the date when the State Government has asked the Government of India to have the Act?

SRI SUBHASH ASTHURE.— Under article 252 the Government of India has got wide jurisdiction to cover such things. We have asked the Government of India to have a comprehensive Act. The moment the Act enacted we will follow the Act That date is not readily available with me.

Harijan Girijan Housing Co-operative Societies in Shimoga District

361 S. M. SHEERNALY CHANDRASHEKAR (Hosanagar).— Will the Minister for Co-operation be pleased to state :—

(*a*) the number of Harijan Girijan Housing Co-operative Societies functioning in Shimoga District and the number of them that are defunct :